ಈಗ ಇದ್ದಕ್ಕಿದ್ದಂತೆ ಮತ್ತೊಂದು ಸಿದ್ಧಾಂತವನ್ನು ಒಪ್ಪಿಕೊಂಡಾಗ ನೀನು ಸೋಲುವ ಸಾಧ್ಯತೆಯಿದೆ. ನೀನು ಸೋಲಬಾರದು. ಇಲ್ಲಿ ಧರ್ಮ ಮುಖ್ಯವಲ್ಲ. ನಿನ್ನ ಸೋಲು-ಗೆಲುವು. ಸಾಕಷ್ಟು ಕಹಿಯನ್ನುಂಡಿದ್ದೀಯಾ. ಇನ್ನೂ ಮುಂದಾದರೂ ಸಂತೋಷದ ಜೀವನ ನಿನ್ನದಾಗಬೇಕೆಂಬುದೇ ನನ್ನ ಬಯಕೆ.'

ಸುಜಾತಳ ಮಾತುಗಳು ಉದ್ದವೆನಿಸಿದರೂ ಮೆಹರ್‌ಗೆ ಅದು ಸರಿಯೆನಿಸಿತು. ತನ್ನ ಬಗ್ಗೆ ತನ್ನ ಗೆಳತಿಗಿರುವ ಕಾಳಜಿ ಅವಳ ಕಣ್ಣುಗಳನ್ನು ಒದ್ದೆ ಮಾಡಿದವು. ನಿರ್ಧಾರ ತೆಗೆದುಕೊಳ್ಳುವುದೆಂದರೆ ತನ್ನ ಕಡೆಗೆ ಬಾಣ ಬಿಟ್ಟುಕೊಳ್ಳುವ ಹಾಗೆ. ಅದು ನೇರವಾಗಿ ತನಗೇ ಚುಚ್ಚುತ್ತದೆ. ಸುಜಾತಳೊಂದಿಗೆ ಅವರ ಮನೆ ಹೊಕ್ಕಾಗ ಅವಳ ತಂದೆ ಹೊರಗೆ ಕುಳಿತು ದಿನಪತ್ರಿಕೆ ತಿರುವುತ್ತಿದ್ದರು. ಇವಳನ್ನು ನೋಡಿದವರೆ 'ಓಹ್ ಮೆಹರುನ್ನೀಸ. ಚೆನ್ನಾಗಿದ್ದೀಯೇನಮ್ಮಾ? ಎಲ್ಲಿದ್ದೇ ಇಲ್ಲೀಯವರೆಗೂ ನಿನ್ನ ಸುದ್ದಿಯೇ ಇಲ್ಲ.' ಎಂದರು ಆತ್ಮೀಯವಾಗಿ. ಅಂದರೆ ತಾನು ಮಾನಸಾಳಾಗಿ ಬಂದಿದ್ದರೂ ಇವರು ಕೂಡ ತನ್ನ ನಿಜವಾದ ಪರಿಚಯವನ್ನೇ ಹೇಳಿದ್ದಾರೆ. ಸುಜಿ ಹೇಳಿದ್ದು ನಿಜ. ಹೆಸರು ಬದಲಾದ ಮಾತ್ರಕ್ಕೆ ಹುಟ್ಟು ಬದಲಾಗುವುದಿಲ್ಲ. ಒಂದು ಸಣ್ಣ ತಪ್ಪು ತನ್ನ ಜೀವನವನ್ನೇ ಬುಡಮೇಲು ಮಾಡಿಬಿಟ್ಟಿತು. ಮೆಹರ್ ಆಗಿ ಪರಿವರ್ತನೆ ಆಗುವುದು ಎಂದರೆ ವೃದ್ಧಾಶ್ರಮದ ಕೆಲಸಕ್ಕೆ ತಿಲಾಂಜಲಿ ಕೊಟ್ಟ ಹಾಗೆ. ಕೆಲಸ ಸಿಗುವವರೆಗೂ ಯಾವುದಾದರೂ ಹಾಸ್ಟೆಲ್‌ಗೆ ಸೇರಬೇಕು. ಅದರ ಬದಲು ಅಪ್ಪ-ಅಮ್ಮನನ್ನು ಹುಡುಕಿ ಅವರೊಂದಿಗಿರುವುದೇ ಸರಿ ಎನಿಸಿತು. ತನ್ನ ಹಳೆಯ ಮನೆಯ ದಾರಿ ಹಿಡಿದಳು. ಎಲ್ಲಾ ಪರಿಚಿತವಿದ್ದರೂ ಈಗ ತನ್ನನ್ನು ನೋಡಿ ನಗುತ್ತಿರುವಂತೆ ಎಲ್ಲವೂ ಅಪರಿಚಿತವೆಂಬಂತೆ. ಆ ಕೊಂಪೆಯಲ್ಲಿ ತಾವಿದ್ದ ಮನೆಯತ್ತ ಅವಳ ಕಾಲುಗಳು ತಂತಾನೇ ನಡೆಸಿಕೊಂಡು ಹೋದವು. ಬುರುಖಾ ಇರದ ತನ್ನನ್ನು ಎಲ್ಲರೂ ತಿನ್ನುವಂತೆ ನೋಡುತ್ತಿದ್ದಾರೆನಿಸಿತು. ಒಂದೆರೆಡು ಪರಿಚಯದ ನಗೆ -ಮಾತು ಬಿಟ್ಟರೆ ಎಲ್ಲರೂ ಬಿಟ್ಟ ಕಣ್ಣು ಬಿಟ್ಟ ಹಾಗೆ ನೋಡುವವರೇ. ಪಕ್ಕದ ಮನೆಯ ಮುಬೀನ್‌ಳನ್ನು ನೋಡಿ ಸ್ವಲ್ಪ ಧೈರ್ಯ ಬಂತು. 'ಮುಬೀನ್ ಆಪಾ, ನನ್ನ ಅಮ್ಮಿ- ಅಬ್ಬೂ ಎಲ್ಲಿ?' ಅವಳ ಮಾತಿಗೆ ಉತ್ತರ ಕೊಡುವ ಬದಲು ಅವಳು ತನ್ನ ಗುಡಿಸಲ ಬಾಗಿಲನ್ನು ಧಡಾರೆಂದು ಹಾಕಿಕೊಂಡಾಗ ತನ್ನ ಮುಖದ ಮೇಲೆ ಏಟು ಬಿದ್ದಂತೆಯೇ ಆಯಿತು ಮೆಹರ್‌ಗೆ. ಎಲ್ಲೆಲ್ಲಿ ಹುಡುಕಿದರೂ ಸಿಗಲಿಲ್ಲ. ಹೇಳುವವರು ಕೂಡ ಯಾರೂ ಇರಲಿಲ್ಲ. ತಾನೇನೋ ಅಪರಾಧ ಮಾಡಿದವಳಂತೆ. ಒಂದು ಕಡೆ ಅಳು ಮತ್ತೊಂದು ಕಡೆ ನಿರಾಸೆ. ಸುಜಿ ಸುಲಭವಾಗಿ ಹೇಳಿದಳು. ಆದರೆ ಮೆಹರ್ ಆಗಿ ತನಗೇನು ಸಿಕ್ಕಿತು? ಅವಮಾನ, ದುಃಖ. ಒಂದೇ ಒಂದು ಸಾಂತ್ವನದ ನುಡಿ ಸಾಕಿತ್ತು. ಅಮ್ಮಿ ಅಬ್ಬು ಸಿಕ್ಕಷ್ಟೇ ಸಂತಸವಾಗುತ್ತಿತ್ತು ಅವಳಿಗೆ. ಭಾರವಾದ ಮನಸ್ಸಿನಿಂದ ಅವಳು ಹಿಂದಿರುಗಿ ನೋಡುತ್ತಲೇ ಹೊರಟಳು. ಎಲ್ಲರೂ ಪರಿಚಯ ಇರುವವರೆ. ಆದರೆ ಇವರೊಳಗಿನ ಮನುಷ್ಯತ್ವವೇ ಸತ್ತು ಹೋಗಿದೆಯೇ? ದೂರದಲ್ಲಿ ಸಲೀಂ ಚಾಚಾ ಬರುತ್ತಿರುವುದು ಕಂಡಿತು. ಅವರೊಬ್ಬರೆ ಎಲ್ಲರಿಗೂ ಸಹಾಯ ಮಾಡಿಕೊಂಡು ಪರೋಪಕಾರದಲ್ಲಿ ನಂಬಿಕೆ ಇಟ್ಟಿರುವವರು.

'ಬೇಟಿ ಮೆಹರ್ ಅಲ್ಲಿ ದೂರದಲ್ಲೀ ಒಂದೇ ಒಂದು ಗುಡಿಸಲು ಕಾಣ್ತಾ ಇದೆಯಲ್ಲ ಅದೇ ನಿನ್ನ ಅಮ್ಮಿ-ಅಬ್ಬು ಅವರ ಗುಡಿಸಲು. ನೀನು ಹೀಗಾದ ಮೇಲೆ ಅವರನ್ನು ಇಲ್ಲಿಂದ ಜನರು ಓಡಿಸಿದರು. ಈಗ ನೀನು ಅಲ್ಲಿಗೆ ಹೋಗದಿರುವುದೇ ಒಳ್ಳೆಯದು. ದೂರದಿಂದಲೇ ನೋಡಿ ಇಲ್ಲಿಂದ ನೀನು ಹೊರಟು ಬಿಡು.'

'ಚಾಚಾ, ನೀವು ನನ್ನ ಬಗ್ಗೆ ಹೀಗೆ ಮಾತನಾಡುವುದೇ? ಇದಕ್ಕೆ ಯಾರು ಕಾರಣ ಹೇಳಿ? ಇದರಲ್ಲಿ ನನ್ನ ತಪ್ಪು ಏನಿದೆ? ಯಾಕೆ ಯಾರೂ ನನ್ನನ್ನು ಮಾತನಾಡಿಸುತ್ತಿಲ್ಲ?'

'ಹೂಂ. ನಾನು ಉತ್ತರ ಹೇಳುವ ಸ್ಥಿತಿಯಲ್ಲಿಲ್ಲ ಬೇಟಿ. ಅಲ್ಲಿ ನೋಡು ನಿನ್ನ ಅಮ್ಮಿ ಹೊರಗೆ ಪಾತ್ರೆ ತೊಳೆಯಲು ಬಂದಿದ್ದಾಳೆ. ನೋಡಿ ಇಲ್ಲಿಂದ ಹೊರಟು ಬಿಡು. ನಿನ್ನ ಜೊತೆ ಮಾತನಾಡುವುದನ್ನು ನಮ್ಮ ಕೇರಿಯ ಜನ ನೋಡಿದರೆ ನನ್ನನ್ನೂ ಆಚೆ ಹಾಕುತ್ತಾರೆ.'

ಉಮ್ಮಳಿಸಿ ಬಂದ ದುಃಖವನ್ನು ಬಲವಂತವಾಗಿ ತಡೆಯುತ್ತಾ ಅವಳು ಅಲ್ಲಿಂದ ನಡೆದೇ ಹೊರಟಳು. ಮನಸ್ಸು ಅಲ್ಲೋಲ ಕಲ್ಲೋಲವಾಗಿತ್ತು. ದಾರಿ ಸವೆದಂತೆ ಕಾಲುಗಳು ವೃದ್ಧಾಶ್ರಮದತ್ತ ನಡೆದವು.

'ಅರೆ ಮಾನಸ, ಒಂದು ದಿನ ಗೆಳತಿಯ ಮನೆಗೆಂದು ಹೋದವಳು ಎಲ್ಲಿಗೆ ಹೊರಟು ಹೋಗಿದ್ದೇ? ನಿನ್ನ